**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.**

**ಓ.ಎಸ್. ನಂಃ17/2022 ಪಿ.ಡಬ್ಲೂಃ 01**

ಸಾಕ್ಷಿಯನ್ನು ಇಂದು ದಿನಾಂಕಃ **20.12.2023** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ** ಪ್ರತಿವಾದಿಗಳ ಪರ ಶ್ರೀ **ಬಿ.ಎಂ.ಎನ್** ವಕೀಲರಿಂದಃ

**1, 3** ಮತ್ತು **4** ನೇ ಪ್ರತಿವಾದಿಗಳು ಹೊಂಬೇಗೌಡರವರ ಮಕ್ಕಳು ಎಂದರೆ ಸರಿ. **2** ನೇ ಪ್ರತಿವಾದಿಯು **3** ನೇ ಪ್ರತಿವಾದಿಯ ಹೆಂಡತಿ ಎಂದರೆ ಸರಿ.

ದಾವಾ ಆಸ್ತಿಯ ಪೂರ್ವಕ್ಕೆ- ಬನ್ನೂರು-ಮಂಡ್ಯ ರಸ್ತೆ, ಪಶ್ಚಿಮಕ್ಕೆ- ಗಂಗೇ ಹೊಂಬಣ್ಣರವರ ಜಮೀನು, ಉತ್ತರ ಹಾಗೂ ದಕ್ಷಿಣಕ್ಕೆ ಪ್ರತಿವಾದಿಗಳ ಜಮೀನು ಇರುತ್ತದೆ. ನನ್ನ ಗಂಡನ ಹೆಸರು ಟಿ. ಲಿಂಗೇಗೌಡ ಎಂದರೆ ಸರಿ. ಟಿ.ಎಸ್ ನಾಗರಾಜು, ಶಿವಣ್ಣ, ಮಂಗಳಮ್ಮ ಮತ್ತು ಗೀತಾರವರು ನನ್ನ ಮಕ್ಕಳು ಎಂದರೆ ಸರಿ. ಸದರಿಯವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಗೆ ಅವರ ತಾಯಿ ಈ ದಾವಾ ಆಸ್ತಿಯನ್ನು ನೀಡಿರುತ್ತಾರೆ. ನನ್ನ ಅಜ್ಜಿ ನನ್ನ ತಂದೆಗೆ ಪತ್ರದ ಮುಖಾಂತರ ದಾವಾ ಆಸ್ತಿಯನ್ನು ನೀಡಿರುತ್ತಾರೆ. ಸದರಿ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

ದಿನಾಂಕ **01.12.1975** ರಂದು ನನ್ನ ತಂದೆಗೆ ಈ ದಾವಾ ಆಸ್ತಿಯ ಬಾಬ್ತು ದಾನಪತ್ರವನ್ನು ಬರೆಯುವ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನನ್ನ ತಂದೆಯ ಸ್ವಾಧೀನದಲ್ಲಾಗಲೀ ಅಥವಾ ನನ್ನ ಸ್ವಾಧೀನದಲ್ಲಾಗಲೀ ಎಂದಿಗೂ ದಾವಾ ಆಸ್ತಿಯು ಇರಲಿಲ್ಲ ಎಂದರೆ ಸರಿಯಲ್ಲ.

ನನ್ನ ಗಂಡ ತೀರಿಕೊಂಡು ಸುಮಾರು **23** ವರ್ಷಗಳಾಗಿರುತ್ತವೆ. ದಾನ ಪತ್ರ ಕಳೆದು ಹೋಗಿ ಸುಮಾರು **23** ವರ್ಷಗಳಾಗಿರುತ್ತವೆ. ದಾನಪತ್ರದ ಕಳೆದ ಹೋದ ಬಾಬ್ತು ಪೊಲೀಸ ಠಾಣೆಯಲ್ಲಿ ದೂರು ನೀಡಿರುವುದಿಲ್ಲ ಅಥವಾ ಪತ್ರಿಕಾ ಪ್ರಕಟಣೆ ತೆಗೆದುಕೊಂಡಿರುವುದಿಲ್ಲ. ದಾವಾ ಸ್ವತ್ತನ್ನು ಅಳತೆ ಮಾಡಿಸಲು ನೀಡಿರುವ ಅರ್ಜಿಯ

ನಕಲನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ಅರ್ಜಿಯ ಬಾಬ್ತು ಎ.ಡಿ.ಎಲ್.ಆರ್ ಬಂದು ಅಳತೆ ಕಾರ್ಯ ಮಾಡಿರುವುದಿಲ್ಲ. ಸದರಿ ಅಧಿಕಾರಿಯು ಅಳತೆ ಕಾರ್ಯದ ಬಾಬ್ತು ನೋಟಿಸ ನೀಡಿರುವ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ನಾನು ಪ್ರತಿವಾದಿಗಳ ವಿರುದ್ಧ ದಿ.30.05.2022 ರಂದು ಪೊಲೀಸ ಠಾಣೆಯಲ್ಲಿ ದೂರು ದಾಖಲಿಸಿದ್ದೆನು ಎಂದರೆ ಸರಿ. ಸಾಕ್ಷಿಗೆ ಒಂದು ದಾಖಲೆ ಮುಖಬಲ್ಲೆ ಮಾಡಲಾಗಿದ್ದು, ಸದರಿ ದಾಖಲೆಯು ಸಾಕ್ಷಿಯು ತಾವು ಪ್ರತಿವಾದಿಗಳ ವಿರುದ್ಧ ಪೊಲೀಸ ಠಾಣೆಯಲ್ಲಿ ದಿ.30.05.2022 ರಂದು ನೀಡಿದ ದೂರಿನ ನಕಲು ಮತ್ತು ಅದರಲ್ಲಿರುವ ಸಹಿ ತನ್ನದು ಎಂದು ಒಪ್ಪಿಕೊಂಡಿದ್ದು, ಸದರಿ ದಾಖಲೆಯನ್ನು ಪ್ರತಿವಾದಿಗಳ ಪರವಾಗಿ **ನಿಡಿ-1** ಎಂದು ಗುರುತಿಸಾಯಿತು.

ನಾನು 5 ನೇ ತರಗತಿಯವರೆಗೆ ವಿಧ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಹಾಗೂ ಬರೆಯಲು ತಕ್ಕಮಟ್ಟಿಗೆ ಬರುತ್ತದೆ.

ಸಾಕ್ಷಿಗೆ ಎರಡು ಪಹಣಿ ಪತ್ರಿಕೆಗಳ ದೃಡೀಕೃತ ನಕಲುಗಳನ್ನು ಮುಖಬಲ್ಲೆ ಮಾಡಲಾಗಿದ್ದು, ಸದರಿ ಪಹಣಿ ಪತ್ರಿಕೆಗಳು ದಾವಾ ಆಸ್ತಿಗೆ ಸಂಬಂಧಿಸಿದ ಪಹಣಿ ಪತ್ರಿಕೆಗಳಾಗಿರುತ್ತವೆ ಎಂದು ಸಾಕ್ಷಿ ಒಪ್ಪಿದ್ದು, ಅವುಗಳನ್ನು ಪ್ರತಿವಾದಿಗಳ ಪರವಾಗಿ **ನಿಡಿ-2** ಮತ್ತು **ನಿಡಿ-3** ಎಂದು ಗುರುತಿಸಾಯಿತು. ಸದರಿ ಪಹಣಿ ಪತ್ರಿಕೆಗಳ ಕಾಲಂ 12 ರಲ್ಲಿ ಹೊಂಬೇಗೌಡರವರ ಹೆಸರು ನಮೂದಾಗಿರುತ್ತದೆ ಎಂದರೆ ಸರಿ.

ನಾನು ನಿಡಿ-1 ದೂರಿನಲ್ಲಿ ‘‘ ಹೊಂಬೇಗೌಡ ಇವರ ಮಕ್ಕಳು ತುಂಬಾ ತೊಂದರೆ ಕೊಡುತ್ತಿದ್ದಾರೆ, ನಾನು ನ್ಯಾಯಾಲಯಕ್ಕೆ ದಾವೆ ಹೂಡಿದ್ದೇನೆ, ಬಾಜುದಾರರಿಗೂ ನೋಟಿಸ ಹೋಗಿದೆ, ಆದರೂ ಸಹ ನನ್ನನ್ನು ಮತ್ತು ನನ್ನ ಮಕ್ಕಳನ್ನು ಜಮೀನಿನ ಹತ್ತಿರ ಸೇರಿಸದೇ ಹಾಗೂ ಸರ್ವೇಯರ್ ಬಂದು ಅಳತೆ ಮಾಡಲು ಸಹ ಬಿಡದೇ ಅಕ್ರಮವಾಗಿ ನನ್ನ ಜಮೀನನ್ನು ವ್ಯವಸಾಯ ಮಾಡುತ್ತಿದ್ದಾರೆ ’’ ಎಂದು ಬರೆಸಿರುತ್ತೇನೆ ಎಂದರೆ ಸರಿ. ನಾನು

ಸ್ವಾಧೀನ ಬಿಡಿಸಿಕೊಡಿ ಎಂದು ಈ ದಾವೆಯನ್ನು ಹಾಕಿರುವುದಿಲ್ಲ ಎಂದರೆ ಸಾಕ್ಷಿಯು ಸ್ವಾಧೀನ ಬಿಡಿಸಿಕೊಡಿ ಎಂದು ಈ ದಾವೆಯನ್ನು ಹಾಕಿರುತ್ತೇನೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳು ಸುಮಾರು 30 ವರ್ಷಗಳಿಂದ ದಾವಾ ಆಸ್ತಿಯ ಸ್ವಾಧೀನ ಬಿಟ್ಟು ಕೊಟ್ಟಿರುವುದಿಲ್ಲ. ಸ್ವಾಧೀನಕ್ಕೆ ಸಂಬಂಧಿಸಿದಂತೆ ಈ ದಾವೆಯನ್ನು ಹೊರತುಪಡಿಸಿ ಬೇರೆ ಯಾವುದೇ ದಾವೆಯನ್ನು ಹಾಕಿರುವುದಿಲ್ಲ.

ನಾನು ಶಿವಣ್ಣ ಮತ್ತು ನಾಗರಾಜುರವರು ಸೇರಿ ನನ್ನ ಮಗಳು ಟಿ.ಎಸ್ ಗೀತಾರವರಿಗೆ ದಿನಾಂಕ 19.09.2020 ರಂದು ಒಂದು ಕ್ರಯದ ಕರಾರುಪತ್ರ ಮಾಡಿಕೊಟ್ಟಿರುತ್ತೇವೆ ಎಂದರೆ ಸರಿ. ಸಾಕ್ಷಿಗೆ ಸದರಿ ಕರಾರುಪತ್ರವನ್ನು ಮುಖಬಲ್ಲೆ ಮಾಡಲಾಗಿದ್ದು, ಸಾಕ್ಷಿಯು ಅದನ್ನು ಸಾಕ್ಷಿ ಒಪ್ಪಿದ ಮೇರೆಗೆ ಸದರಿ ದಾಖಲೆಯನ್ನು ಪ್ರತಿವಾದಿಗಳ ಪರವಾಗಿ **ನಿಡಿ-4** ಎಂದು ಗುರುತಿಸಲಾಯಿತು. ಸದರಿ ಕರಾರುಪತ್ರದ ವಿಚಾರವನ್ನು ಈ ದಾವೆಯಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿ.

ದಾವಾ ಆಸ್ತಿಯಲ್ಲಿ 15 ತೆಂಗಿನ ಮರ ಹಾಗೂ 8 ತೇಗದ ಮರ ಇರುತ್ತವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಯಾವುದೇ ಮರಗಳು ಇರುವುದಿಲ್ಲ. ದಾವಾ ಆಸ್ತಿಯಲ್ಲಿ ಪ್ರತಿವಾದಿಗಳು ಹುರುಳಿ ಹಾಗೂ ರಾಗಿಯನ್ನು ಬೆಳೆಯುತ್ತಿದ್ದಾರೆ.

ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಮತ್ತು ಸ್ವಾಧೀನ ಇರುವುದಿಲ್ಲ ಹಾಗೂ ನಾನು ಸುಳ್ಳು ದಾವೆಯನ್ನು ಪ್ರತಿವಾದಿಗಳ ವಿರುದ್ಧ ಹಾಕಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲಃ

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**

**ನ್ಯಾಯಾಲಯ ತಿ.ನರಸೀಪುರ.**